ತಿಳಿಸಿದ್ದರಿಂದ ಯಾವುದಕ್ಕೂ ಕಾಯುವ ಅಗತ್ಯವಿರಲಿಲ್ಲ. ಆಶ್ರಮದ ದಾಯಿಯೊಬ್ಬಳು ಬಂದು ಕೂಸನ್ನು ಎತ್ತಿಕೊಂಡಳು. ತಾಯಿಯು ತನ್ನ ಕೈಯಿಂದಲೇ ಎತ್ತಿ ತಾನು ಹೆತ್ತ ಆ ಕರುಳ ಕುಡಿಯನ್ನು ದಾಯಿಗೆ ಒಪ್ಪಿಸಿದಳು. ಅದೊಂದು ಮನಕಲಕುವ ದೃಶ್ಯವಾಗಿತ್ತು. ಅದನ್ನು ನಾನೆಂದೂ ಮರೆಯಲು ಸಾಧ್ಯವಿಲ್ಲ. ಬಹುಶಃ ಇಂಥ ದೃಶ್ಯವನ್ನು ಪ್ರತ್ಯಕ್ಷವಾಗಿ ಮತ್ತಾರೂ ಕಣ್ಣಾರೆ ಕಂಡಿರಲಿಕ್ಕಿಲ್ಲ. ನನಗೆ ಎಂಥದೋ ವಿಲಕ್ಷಣ ಆಘಾತವಾಗಿತ್ತು. ಕಾರಿನಲ್ಲಿ ಬರುತ್ತಿರುವಾಗ ಮಗು ತಾಯಿಯ ಎದೆ ಹಾಲು ಕುಡಿಯುತ್ತಿತ್ತು. ಅದೇ ಕೊನೆ. ಆ ಕೂಸಿಗೆ ಇನ್ನೆಂದೂ ತಾಯಿಯ ಹಾಲು ದೊರೆಯಲಾರದು. ತಾಯಿಯ ಮಮತೆಯಿಂದ ಆಜೀವ ಪರ್ಯಂತ ವಂಚಿತ ಮಗು. ಯಾವುದೇ ಅಪರಾಧ ಎಸಗದ ಕೂಸಿಗೇಕೆ ಈ ಶಿಕ್ಷೆ?

ಈ ಆಘಾತದಿಂದ ಚೇತರಿಸಿಕೊಳ್ಳಲು ನನಗೆ ಎರಡು ಮೂರು ದಿನಗಳೇ ಬೇಕಾಯಿತೆಂದು ಕಾಣುತ್ತದೆ. ಇದಾಗಿ ಕೆಲವೇ ದಿನಗಳ ನಂತರ ನಾನು ಅಲ್ಲಿಂದ ಹೊರಟು ಇಲ್ಲಿಗೆ ಬಂದು ಹೊಸ ಕೆಲಸಕ್ಕೆ ಸೇರಿಕೊಂಡೆ. ಅಂದಿನಿಂದ ವರ್ಷಕ್ಕೆರಡಾವರ್ತಿ ಆರೋಗ್ಯ ತಪಾಸಣೆಗೆಂದು ಆಶ್ರಮಕ್ಕೆ ಹೋದಾಗ ಆ ಮಗುವನ್ನು ವಿಶೇಷ ಆಸಕ್ತಿಯಿಂದ ಗಮನಿಸುತ್ತಿದ್ದೆ. ಅದು ಹಂತ ಹಂತವಾಗಿ ಬೆಳೆದದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ. ನನಗೆ ತಿಳಿಯದ ಕಾಯಿಲೆ ಬಂದಾಗ, ಚಿಕ್ಕ ಮಕ್ಕಳ ತಜ್ಞನಾದ ನನ್ನ ಸ್ನೇಹಿತನನ್ನು ಕರೆದುಕೊಂಡ್ಹೋಗಿ ಚಿಕಿತ್ಸೆ ಕೊಡಿಸಿದ್ದೇನೆ. ಅವನೂ ಅಷ್ಟೇ. ನನ್ನನ್ನು ತೀರ ಹಚ್ಚಿಕೊಂಡಿದ್ದಾನೆ. ಅವನ ಓರಗೆಯ ಎಂಟ್ಹತ್ತು ಮಕ್ಕಳ ಜತೆಗೆ ಇದ್ದಾಗಲೂ, ಹೋದಾಗಲೆಲ್ಲ ನನ್ನನ್ನು ಕಂಡ ಕ್ಷಣ 'ಮಾಮಾ' ಎಂದು ಕೂಗುತ್ತ ಓಡಿ ಬರುತ್ತಾನೆ.

ಸುನೀಲನ ಎದೆಯ ಮೇಲೆ ಸ್ಟೆಥಾಸ್ಕೋಪ್ ಇಟ್ಟಿದ್ದೆನಾದರೂ, ನನಗೆ ಅವನ ಹೃದಯದ ಬಡಿತವಾಗಲಿ, ಉಸಿರಾಟದ ಧ್ವನಿಯಾಗಲೀ ಕೇಳುತ್ತಿರಲಿಲ್ಲ. 'ಭೂದೇವಿ ಸುನೀಲ' ಇಬ್ಬರೂ ಒಮ್ಮೆಲೇ ನನ್ನ ಮನಸ್ಸನ್ನೆಲ್ಲ ಆಕ್ರಮಿಸಿಬಿಟ್ಟಿದ್ದರು. ಸತೀಶ ಮತ್ತು ಭೂದೇವಿ ಸುನೀಲನನ್ನು ನೋಡಿರಲಿಕ್ಕಿಲ್ಲವೇ. ನೋಡಿದ್ದರೂ ಕೂಡ ಈ ಹುಡುಗ ಹಿಡಿಸಿರಲಿಕ್ಕಿಲ್ಲ. ನಾನೇ ಇನ್ನೊಮ್ಮೆ ಭೂದೇವಿಗೆ ಸುನೀಲನನ್ನು ಯಾಕೆ ತೋರಿಸಬಾರದು? ಎಂದೆನಿಸಿತು.

ಅಂತೂ ಏನೋ ಒಂದು ನಿರ್ಧರಿಸಿ 'ನನ್ನೊಂದಿಗೆ ಕಾರಿನಲ್ಲಿ ಬರುತ್ತಿಯಾ, ಪೇಟೆಗೆ ಹೋಗೋಣ' ಎಂದು ಕೇಳಿದೆ. ಕೂಡಲೇ ಒಪ್ಪಿದ ಸುನೀಲ. ಆರೋಗ್ಯ ತಪಾಸಣೆಯನ್ನು ಅಲ್ಲಿಗೇ ನಿಲ್ಲಿಸಿ, ಉಳಿದವರನ್ನು ನಾಳೆ ನೋಡುವುದಾಗಿ ಹೇಳಿ, ಅಲ್ಲಿಯೇ ಇದ್ದ ಮಕ್ಕಳ ಮೇಲ್ವಿಚಾರಕರಿಗೆ ತಿಳಿಸಿ ಬಂದೆ.



ಪೇಟೆಯಲ್ಲಿ ಅವನಿಗೆ ಹೊಸ ಡ್ರೆಸ್, ಬೂಟು, ಕಾಲು ಚೀಲ ಕೊಡಿಸಿದೆ. ಎಲ್ಲ ನೋಡಿ ಸುನೀಲ ಕುಣಿದು ಕುಪ್ಪಳಿಸಿದ. ಸುನೀಲನನ್ನು ಆಶ್ರಮಕ್ಕೆ ಮುಟ್ಟಿಸಿ ನಾನು ಮನೆ ತಲುಪಿದಾಗ ಆಗಲೇ ಸೂರ್ಯಾಸ್ತವಾಗಿತ್ತು. ಮನೆಯ ಬಾಗಿಲು ತೆಗೆಯುತ್ತಲೇ 'ಯಾರೋ ಒಬ್ಬಳು ಬಂದು ನಿಮಗಾಗಿ ಈ ಲಕೋಟೆಯನ್ನು ಕೊಟ್ಟು ಹೋಗಿದ್ದಾಳೆ' ಎಂದು ಒಂದು ಬಿಳಿ ಲಕೋಟೆಯನ್ನು ನನ್ನ ಕೈಯಲ್ಲಿಟ್ಟಳು ನನ್ನಾಕೆ. ಸೀಲ್ ಮಾಡಿದ ಲಕೋಟೆಯ ಮೇಲೆ ಒಂದಕ್ಷರವೂ ಇರಲಿಲ್ಲ. ಕುತೂಹಲ ತಡೆಯಲಾರದೇ ಒಡೆದು ಓದಲು ಪ್ರಾರಂಭಿಸಿದೆ.

'ಡಾಕ್ಟರೆ, ನಿಮ್ಮ ಸ್ನೇಹಿತ ಗೈನೆಕಾಲಜಿಸ್ಟ್‌ನ ಆಸ್ಪತ್ರೆಯಲ್ಲಿ ನಿಮ್ಮನ್ನು ನೋಡಿದಾಗಲೇ ನಾನು ನಿಮ್ಮನ್ನು ಗುರುತಿಸಿದೆನಾದರೂ, ನೀವು ಮಾತ್ರ ನನ್ನನ್ನು ಗುರುತಿಸಲಿಲ್ಲ. ಮೂರು ವರ್ಷಗಳ ಹಿಂದೆ ನಾನು ನಿಮ್ಮ ಆಸ್ಪತ್ರೆಯಲ್ಲಿ ನಾಲ್ಕು ತಿಂಗಳು ಅಜ್ಞಾತವಾಸದಲ್ಲಿದ್ದೆ. ಅದೊಂದು ಕರಾಳ ಅನುಭವ. ನೆನೆಸಿಕೊಂಡರೆ ಮೈಜುಮ್ಮೆನ್ನುತ್ತದೆ. ಆ ಸಮಯದಲ್ಲಿ ನೀವು ತೋರಿದ ಅನುಕಂಪಕ್ಕೆ ನಾನು ಚಿರಋಣಿಯಾಗಿದ್ದೇನೆ. ಸತೀಶನಂಥ ಗಂಡನನ್ನು ಕೊಟ್ಟ ದೇವರು ಮಕ್ಕಳ ಭಾಗ್ಯವನ್ನು ದಯಪಾಲಿಸಲಿಲ್ಲ. ಮಗುವನ್ನು ದತ್ತು ತೆಗೆದುಕೊಳ್ಳುವ ನಿರ್ಧಾರ ಮಾಡಿದಾಗ ನನ್ನಲ್ಲಿ ಒಂದು ಆಸೆ ಚಿಗುರಿತು. ಈ ಆಸೆಯ ಬೆನ್ನು ಹತ್ತಿ, ನಿಮ್ಮ ಮನೆಗೆ ಬಂದೆ. ನನ್ನ ಕತೆಯನ್ನೆಲ್ಲ ನಿಮಗೆ ಹೇಳಿ ನಾನು ಸಾಕಿ ಸಲುಹಲು ಬಯಸುವಂಥ ಮಗುವನ್ನು ನೀವು ಮಾತ್ರ ನನಗೆ ಹುಡುಕಿಕೊಡಬಲ್ಲಿರಿ ಎಂದು ಹೇಳಬೇಕೆಂದು ನಿರ್ಧರಿಸಿದ್ದೆ. ಆದರೆ ಆ ರೀತಿ ನಾನು ಹೇಳುವ ಮೊದಲೇ ನೀವಾಗಿಯೇ ಅನಾಥಾಶ್ರಮದ ಮಾತು ಎತ್ತಿದಾಗ ನಾನು ನನ್ನ ಕತೆಯನ್ನು ಅರ್ಧದಲ್ಲೇ ನಿಲ್ಲಿಸಿ ಉಳಿದರ್ಧವನ್ನು ನಿಮ್ಮಿಂದ ಮರೆಮಾಚಿದೆ. ಬಹುಶಃ ನನ್ನ ಮಗುವನ್ನು ನಾನೇ ಹುಡುಕಿಕೊಳ್ಳಬಲ್ಲೆನೆಂಬ ಹುಚ್ಚು ನಂಬಿಕೆ ನನ್ನಲ್ಲಿ ಉಂಟಾಯಿತು. ಎರಡು ಸಲ ನಾನು ಆಶ್ರಮಕ್ಕೆ ಹೋಗಿ, ನನ್ನ ಕರುಳ ಕುಡಿಯನ್ನು ಗುರುತಿಸಲು ಪ್ರಯತ್ನಿಸಿ ವಿಫಲಳಾದೆ. ಮೂರು ವರ್ಷ ವಯಸ್ಸಿನ ಎಂಟ್ಹತ್ತು ಹುಡುಗರ ಮಧ್ಯ ನಿಂತ ನಾನು ಹುಚ್ಚಳಂತಾಗಿದ್ದೆ. ಅವರಲ್ಲೇ ಇದ್ದ ನನ್ನ ಕಂದಮ್ಮನನ್ನು ಗುರುತಿಸಲು ವಿಫಲಳಾದ ನಾನು ತಾಯ್ತನಕ್ಕೆ ಒಂದು ಕಳಂಕ.'

'ಡಾಕ್ಟರ್, ಈಗ ನೀವೇ ನನ್ನ ಕೊನೆಯ ಆಸೆ. ನಿಮಗೆ ನೆನಪಿರಲಿಕ್ಕಿಲ್ಲ, ನನಗೆ ಆ ದಿನವನ್ನು ಮರೆಯಲಿಕ್ಕಾಗದು. ನಾಳೆ ನನ್ನ ಮಗನ ಮೂರನೆಯ ಹುಟ್ಟುಹಬ್ಬ. ಆಚರಿಸಲು ಅನುವು ಮಾಡಿಕೊಡುವುದು ನಿಮ್ಮ ಕೈಯಲ್ಲಿದೆ. ನಾಳೆ ಮುಂಜಾನೆ ಫೋನ್ ಮಾಡುವೆ.'

ಪತ್ರವನ್ನೋದಿ ಯಾರಿಗೂ ಕಾಣದಂತೆ ಹರಿದು ಹಾಕಿದೆ. ಬೇಕರಿಗೆ ಫೋನ್ ಮಾಡಿ, ಸುನೀಲನ ಹೆಸರು ಹಾಕಿ ಬರ್ತ್‌ಡೇ ಕೇಕ್ ಒಂದನ್ನು ಆಶ್ರಮಕ್ಕೆ ಕಳಿಸಲು ಹೇಳಿದೆ. ನಿರ್ದೇಶಕರಿಗೆ ಫೋನ್ ಮಾಡಿ ಸುನೀಲನ ಬರ್ತ್‌ಡೇ ಆಚರಿಸಲು ನಾಳೆ ಬರುತ್ತಿರುವುದಾಗಿಯೂ ನನ್ನೊಂದಿಗೆ ಸತೀಶ ಮತ್ತು ಭೂದೇವಿಯವರೂ ಬರುವುದಾಗಿ ಸೂಚ್ಯವಾಗಿ ತಿಳಿಸಿದೆ. ಇನ್ನೇನಾದರೂ ಉಳಿಯಿತೇ? ಹಾಂ, ಹೋಗುವಾಗ ಮೇಣದ ಬತ್ತಿ ಒಯ್ಯಲು ಮರೆಯಬಾರದು. 'ಆದದ್ದೆಲ್ಲ ಒಳಿತೇ ಆಯಿತು' ಎಂದುಕೊಂಡು ಸ್ವಲ್ಪ ವಿಶ್ರಮಿಸಲು ಆರಾಮ ಕುರ್ಚಿಯ ಮೇಲೆ ಒರಗಿ ಕಣ್ಣು ಮುಚ್ಚಿದೆ. 'ಚಹಾ ತೊಗೊಳ್ರಿ' ನನ್ನ ಅರ್ಧಾಂಗಿಯ ಧ್ವನಿ ನನ್ನನ್ನು ಎಚ್ಚರಿಸಿತ್ತು.

**ಪ್ರತಿಕ್ರಿಯಿಸಿ: feedback@sudha.co.in**